

# ಉಡುಪಿನಲ್ಲಿ ಲೇಸ್ ಸೌಂದರ್ಯಕ್ಕೆ ಪ್ಲಸ್

**ಸೊಗಸಾದ, ಆಕರ್ಷಕ ಲೇಸ್ ಇರುವ ಉಡುಗೆ ಮತ್ತೆ ಫ್ಯಾಷನ್ ಆಗಿ ಟ್ರೆಂಡ್ ಸೃಷ್ಟಿಸುತ್ತಿದೆ. ಹಿಂದೆಲ್ಲ ಸ್ಕರ್ಟ್, ಬ್ಲೌಸ್‌ಗಳಿಗೆ ಮಾತ್ರ ಸೀಮಿತವಾಗಿದ್ದ ಲೇಸ್ ಇದೀಗ ಗಾಗ್ರ, ಸಲ್ವಾರ್, ಟಾಪ್‌ಗಳಲ್ಲೂ ಮಿಂಚುತ್ತಿವೆ.**

**■ ಆಶಾ ಎಸ್. ಕುಲಕರ್ಣಿ**

ಫ್ಯಾಷನ್ ಲೋಕ ದಿನದಿಂದ ದಿನಕ್ಕೆ ಬದಲಾಗುತ್ತಲೇ ಇರುತ್ತದೆ. ಇವತ್ತಿನ ಫ್ಯಾಷನ್ ನಾಳೆನೇ ಔಟ್ ಆಫ್ ಫ್ಯಾಷನ್ ಆಗಬಹುದು. ಹಳೆಯ ಫ್ಯಾಷನ್ ಕೂಡ ಮತ್ತೆ ಮತ್ತೆ ಹೊಸ ರೂಪ ತಾಳಿ ಫ್ಯಾಷನ್ ಲೋಕಕ್ಕೆ ಲಗ್ಗೆ ಇಡಬಹುದು. ಇವುಗಳ ಸಾಲಿನಲ್ಲಿ ಈಗ ಲೇಸ್ ಕೂಡ ಸೇರಿದೆ. ಪುಟ್ಟ ಮಕ್ಕಳ ಕಲರ್‌ಫುಲ್ ಫ್ರಾಕ್‌ಗಳ ಕೆಳಭಾಗದಲ್ಲಿ ಕಟ್ ಪೀಸೊಂದು ಇದ್ದರೆ ಅದರ ಅಂದವೇ ಬೇರೆ. ಆ ಕಟ್‌ಪೀಸ್ ಲೇಸಿನದ್ದಾಗಿದ್ದರಂತೂ ಅದರ ಅಂದಕ್ಕೆ ಸಾಟಿಯೇ ಇಲ್ಲ. ಲೇಸ್ ಅಂದರೆ ಹಾಗೇ ಪಾರದರ್ಶಕವಾದ ಈ ತುಂಡು ಬಟ್ಟೆಯಲ್ಲಿ ಅದೆಂಥಾ ಸೌಂದರ್ಯ ಅಡಗಿದೆ ಎಂದರೆ ನಮಗೆ ಆಶ್ಚರ್ಯವಾಗುತ್ತದೆ. ಜೇಡದ ಬಲೆಯಂತೆ ಹೆಣೆದ ಈ ಬಟ್ಟೆ ಹಿಂದೊಮ್ಮೆ ಫ್ಯಾಷನ್ ಲೋಕದಲ್ಲಿ ರಾಣಿಯಂತೆ ಮೆರೆದಿತ್ತು. ಆದರೆ ಕೆಲಕಾಲ ನಮ್ಮಿಂದ ದೂರ ಸರಿದಿದ್ದ ಈ ಲೇಸ್ ಈಗ ಹೊಸ ಹೊಸ ವಿನ್ಯಾಸ ಪಡೆದು ಮತ್ತೆ ಫ್ಯಾಷನ್ ಲೋಕಕ್ಕೆ ಎಂಟ್ರಿ ಕೊಟ್ಟಿದೆ. ಆಧುನಿಕ ಮನೋಭಾವದ ಯುವತಿಯರನ್ನು ಸೂಜಿಗಲ್ಲಿನಂತೆ ತನ್ನತ್ತ ಸೆಳೆಯುತ್ತಿರುವ ಈ ಲೇಸ್ ಉಡುಪುಗಳು ಸೆಲೆಬ್ರಿಟಿಗಳು, ಮಾಡೆಲ್‌ಗಳಿಗೆ ಅತ್ಯಂತ ಹಾಟ್ ಫೇವರೆಟ್ ಕೂಡ ಆಗಿದೆ.

ಪುರಾತನವಾದ ಕಸೂತಿಯಲ್ಲಿ ಒಂದಾಗಿದ್ದ ಈ ಲೇಸ್ ತಯಾರಿಸುವ ಕಲೆ ಸುಮಾರು 15 ರಿಂದ 16ನೇ ಶತಮಾನದಿಂದಲೂ ಚಾಲ್ತಿಯಲ್ಲಿದೆ. ಆಗಿನ ಜನ ಬಂಗಾರದ ಎಳೆ, ಬೆಳ್ಳಿಯ ಎಳೆ, ತಾಮ್ರದ ಎಳೆಗಳಿಂದ ಸುಂದರವಾಗಿ ಲೇಸ್‌ಗಳನ್ನು ತಯಾರಿಸುತ್ತಿದ್ದರು. ಅಮೆರಿಕ, ಇಟಲಿ, ರಷ್ಯಾ ಮುಂತಾದ ದೊಡ್ಡ ದೊಡ್ಡ ದೇಶಗಳಲ್ಲಿ ಅಧಿಕಾರಿಗಳು ಧರಿಸುವ ಕೋಟ್ ಮತ್ತು ಕ್ಯಾಪ್‌ಗಳ ಮೇಲೆ ಗೋಲ್ಡನ್ ಲೇಸ್‌ಗಳನ್ನು ಅಲಂಕಾರಕ್ಕೆ ಬಳಸುತ್ತಿದ್ದರು. ಅದು ಅವರ ಪ್ರತಿಷ್ಠೆಯ ಸಂಕೇತವೂ

